

ಎದುರಾಗುವ ತೊಂದರೆ ತಾಪತ್ರಯಗಳನ್ನು ಅವು ಹೇಗೆ ನಿಭಾಯಿಸಿಕೊಳ್ಳುತ್ತವೆ? ಜೊತೆಗಾರ ಹಕ್ಕಿಗಳ ಅಕಾಲಿಕ ಸಾವಾದಾಗ ಅವು ಹೇಗೆ ವರ್ತಿಸುತ್ತವೆ? ಬರುವ ಮತ್ತು ಹಿಂತಿರುಗಿ ಹೋಗುವ ದಿನ ಮತ್ತು ದಿನಾಂಕವನ್ನು ಅಷ್ಟು ಕರೆಕ್ಟಾಗಿ ಹೇಗೆ ಪಾಲಿಸುತ್ತವೆ? ಎಂಬಿತ್ಯಾದಿ ಸಂಗತಿಗಳು ಸಾಮಾನ್ಯ ಎನಿಸುವುದಿಲ್ಲ. ಹಕ್ಕಿಗಳ ಬುದ್ಧಿ ಸಾಮರ್ಥ್ಯದ ಹಿಂದೆ ನಿಸರ್ಗದ ಯಾವ ಶಕ್ತಿ ಕೆಲಸ ಮಾಡುತ್ತಿದೆ ಎಂದು ಯೋಚಿಸಿದರೆ ಕಣ್ಣಿಗೆ ಕಾಣದ ಕಿವಿಗೆ ಕೇಳದ ಹಲವಾರು ವಿಷಯಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ.

ಈ ಕ್ಷಣಕ್ಕೂ ವಲಸೆ ಹಕ್ಕಿಗಳ ಆಗುಹೋಗುಗಳ ಬಗ್ಗೆ ಇಡೀ ಜೀವಮಾನ ಸವೆಸಿದರೂ ತಿಳಿಯಲಾಗದಷ್ಟು ವಿಷಯಗಳಿವೆ. ಒಂದು ಅಂದಾಜಿನ ಪ್ರಕಾರ ಎಂಟು ನೂರಕ್ಕೂ ಹೆಚ್ಚಿನ ಪ್ರಭೇದದ ಹಕ್ಕಿಗಳು ಪ್ರತಿ ವರ್ಷ ಭಾರತಕ್ಕೆ ವಲಸೆ ಬರುತ್ತವೆ. ಇವುಗಳಲ್ಲಿ ನೀರಿನ ಹಕ್ಕಿಗಳು, ಕಾಡಿನ ಹಕ್ಕಿಗಳು, ಹುಲ್ಲುಗಾವಲಿನ ಹಕ್ಕಿಗಳು, ಕಡಲಿಗೆ ಬರುವ ಹಕ್ಕಿಗಳು, ಬೇಟೆಗಾರ ಹದ್ದುಗಳು ಇದ್ದಾವೆ. ಒಂದೊಂದರ ಆಹಾರ ಕ್ರಮವೂ, ಆದ್ಯತೆಯೂ ವಿಭಿನ್ನ. ತಮಗೆ ಸೂಕ್ತ ಆಹಾರ ಮತ್ತು ರಕ್ಷಣೆ ಸಿಗುವ ಲಗತ್ತಾದ ಜಾಗ ಯಾವುದು ಎಂಬುದನ್ನು ಅವು ಮೊದಲೇ ನಿರ್ಧರಿಸಿಕೊಂಡಿರುತ್ತವೆ. ಮಾಡಿದಡುಗೆ ಉಣ್ಣಲು ನೆಂಟರು ಮನೆಗೆ ಬರುವಂತೆ ನಿಗದಿತ ದಿನವೇ ಬಂದಿಳಿಯುತ್ತವೆ.

ಅನೇಕ ಪಟಗಾರರ ಜೊತೆಗಿನ ಒಡನಾಟ, ಮಾತುಕತೆ, ಪುಸ್ತಕಗಳ ಮಾಹಿತಿ, ಪಕ್ಷಿತಜ್ಞರ ತಿಳಿವಳಿಕೆ ಎಲ್ಲವನ್ನೂ ಒಗ್ಗೂಡಿಸಿ ನಿಮಗಿಲ್ಲಿ ಕೊಂಚ ಮಾತ್ರ ಹೇಳಬಲ್ಲೆ. ಭಾರತದ ಅನೇಕ ಪಕ್ಷಿಧಾಮಗಳ ಪ್ರವಾಸವು ನನಗೆ ವಲಸೆ ಹಕ್ಕಿಗಳ ರೋಚಕ ಬದುಕನ್ನು ನೋಡಿ ಕಲಿಯಲು ಅವಕಾಶ ಮಾಡಿಕೊಟ್ಟಿತು. ಭಾರತದಲ್ಲಿ ಚಳಿಗಾಲ ಶುರುವಾಗುವ ಹೊತ್ತಿಗೆ ವಿಪರೀತ ವಿದೇಶಿ ಹಕ್ಕಿಗಳು ಓಡೋಡಿ ಬರುತ್ತವೆ. ಮಳೆಗಾಲದಲ್ಲೂ ಖಗಗಳು ಭಾರತಕ್ಕೆ ಬರುತ್ತವಾದರೂ ಅವುಗಳ ಸಂಖ್ಯೆ ತೀರಾ ಕಡಿಮೆ. ನಮ್ಮ ಗಮನವೆಲ್ಲಾ ಈ ಚಳಿಗಾಲದ ಅತಿಥಿಗಳ ಕಾಣುವ ಕನಸಲ್ಲೇ ಮುಗಿದು ಹೋಗುತ್ತದೆ. ಒಂದೇ ಸಲಕ್ಕೆ ದೇಶದ ಮೂಲೆಮೂಲೆಗಳಲ್ಲಿ ಬಂದು ವ್ಯಾಪಿಸುವ ಅನೇಕ ವಲಸೆ ಹಕ್ಕಿಗಳ ಪೈಕಿ ಒಂದು ಹಕ್ಕಿಯ ಕಥೆಯನ್ನು ಮಾತ್ರ ಇಲ್ಲಿ ಹೇಳುತ್ತೇನೆ.

ನಾನು ಮೊದಲಿಗೆ ಹದಿನಾರು ಕೆರೆಯ ಬಳಿಯಲ್ಲಿ ಕಾಯುತ್ತಿದ್ದ ಬಾರ್ ಹೆಡೆಡ್ ಗೀಸ್ ಹಕ್ಕಿಯ ಬಗ್ಗೆ ಒಂದಷ್ಟು ಹೇಳಿರುವೆ. ಈ ಹಕ್ಕಿಯನ್ನು ನಾನು ರಾಜಸ್ಥಾನದ ಭರತಪುರ, ಕಬಿನಿ ಜಲಾಶಯದ ಹಿನ್ನೀರು, ತುಂಗಭದ್ರಾ ಜಲಾಶಯದ ಬಯಲು, ಮತ್ತು ಮುಖ್ಯವಾಗಿ ಗದಗದ ಬಳಿಯ ಮಾಗಡಿ ಕೆರೆಯಲ್ಲಿ ನೋಡಿದ್ದೇನೆ. ಜಗತ್ತಿನಲ್ಲೇ ಅತಿ ಎತ್ತರ ಎನಿಸಿದ ಹಿಮಾಲಯ ಪರ್ವತದ ಎತ್ತರವನ್ನು ದಾಟಿ ಬರುವ ದುಸ್ಸಾಹಸ ಮಾಡಬಲ್ಲ ದೈತ್ಯ ಧೈರ್ಯದ ಹಕ್ಕಿಯಿದು. ಈ ಪಾಟಿ ಎತ್ತರದಲ್ಲಿ ಹಾರುವ ಹಕ್ಕಿಗೆ ಉಸಿರಾಟವೇ ಕಷ್ಟವಾಗುತ್ತದೆ. ಆಮ್ಲಜನಕದ ಪ್ರಮಾಣ ಕಡಿಮೆಯಿರುವ ಇಂಥಲ್ಲಿ ಇದರ ಶ್ವಾಸಕೋಶಗಳು ಅಶಕ್ತಗೊಂಡು ಹೈರಾಣಾಗಬಹುದು. ರಕ್ತದ ಸಂಚಾರ ಏರುಪೇರಾಗಬಹುದು. ಕೂತು ಸುಧಾರಿಸಿಕೊಳ್ಳಲು